ಹೇಗೆ, ಇಲ್ಲ ಅನ್ನೋದಿಲ್ವಲ್ಲಾ? ಗಿಣಿ ಮೂತಿ ಹೇಗಿದೆ?' ಎಂದು ಅವಳ ಮೂಗು ಹಿಂಡಿದ. ಅವಳು ಮುಖ ಸೊಟ್ಟಗೆ ಮಾಡಿ ಅವನನ್ನು ಅಣಕಿಸಿದಾಗ 'ಮದ್ವೆಯಾಗಿ ಮೂರು ದಾಟಿದ್ರೂ ಬುದ್ಧಿ ಬದಲಾಗಿಲ್ಲ' ಎಂದು ಸುತ್ತ ಕಣ್ಣಾಡಿಸಿ 'ಸೋಮಯ್ಯ ಎಲ್ಲೆ?' ಎಂದು ಕೇಳಿದ.

'ಒಳಕ್ಕೆ ಹೋಗಿ ಮಾತಾಡೋಣವಂತೆ' ಎಂದು ಮುತ್ತಮ್ಮ ಗೇಟು ಹಾಕಿ ಮನೆಯೊಳಗೆ ಬಂದಳು. ಬಾಗಿಲಿನ ಬೋಲ್ಟು ಸಿಕ್ಕಿಸಿ ಅವನನ್ನು ಹಜಾರದಲ್ಲಿ ಕೂರಿಸಿ ಅಡುಗೆ ಮನೆಗೆ ನೆಗೆದಳು. ಹಜಾರದಲ್ಲಿ ಕೂತ ಭೀಮಯ್ಯ ಟೀವಿ ಆನ್ ಮಾಡಿದ. ಚಿತ್ರಹಾರ್ ಬರ್ತಿತ್ತು. ಇಷ್ಟು ದೊಡ್ಡ ಮನೆಯಲ್ಲಿ ಅರಗಿಣಿಯಂತಹಾ ಮುತ್ತಮ್ಮ ಒಬ್ಬಳೇ ಇದ್ದಾಳೆ. ಸೋಮಯ್ಯ ಹಳೇ ಚಾಳಿಗಳನ್ನೆಲ್ಲಾ ಮುಂದುವರಿಸಿಕೊಂಡೇ ಬಂದಿದ್ದಾನೆ. ಅವಳಪ್ಪನ ಬೆಡಿಗೆ ಹೆದರಿ ಮುತ್ತಮ್ಮ ಸೋಮಯ್ಯನ ಹಾರಕ್ಕೆ ಕುತ್ತಿಗೆಯೊಡ್ಡಿದ್ದು, ಒಟ್ಟಿಗೇ ಆಡಿ ಬೆಳೆದ ತನಗೆ ಮುತ್ತಮ್ಮನನ್ನು ಕೊಡಲು ಅವಳಪ್ಪ ಒಪ್ಪಲೇಯಿಲ್ಲ.

'ಆ ಭೀಮಯ್ಯನ ಅಪ್ಪ ಇದ್ದದ್ದನ್ನೆಲ್ಲಾ ಜುಗಾರಿಯಲ್ಲಿ ಕಳಕೊಂಡ. ಈಗ ಆ ಬಿಕನಾಸಿ ಭೀಮಯ್ಯ ನಮ್ಮ ಎಸ್ಟೇಟು ಮೇಲೆ ಕಣ್ಣಾಕಿದ್ದಾನೆ. ಅದಕ್ಕೆ ನೀನೊಂದು ನೆಪ. ಸಣ್ಣವರಿದ್ದಾಗ ಎಲ್ಲಾ ಸರಿಯಪ್ಪಾ, ಈಗ ನಿನ್ನ ಪ್ರಾಯ ಎಷ್ಟು ಗೊತ್ತುಂಟಾ? ಆ ಪರ್ದೇಸಿಗೆ ನಿನ್ನನ್ನು ಕೊಡುವ ಬದಲು ಕಡಿದು ಕಾವೇರಿಗೆ ಚೆಲ್ಲಿಯೇನು ಎಂದು ಅವಳಪ್ಪ ಹೇಳುತ್ತಿದ್ದುದನ್ನು ಮುತ್ತಮ್ಮ ತನಗೆ ತಿಳಿಸಿದ್ದಳು. ಭೀಮಯ್ಯ ಮಿಲಿಟರಿ ಸೇರಿದ ಮೇಲೂ ಅವಳಪ್ಪ ಬದಲಾಗಿರಲಿಲ್ಲ, ಸೇನೆ ಸೇರಲು ಹೊರಟವನು ಅವಳನ್ನು ನೋಡಲೆಂದು ಬಂದಾಗ ಅಪ್ಪ ಮನೆಯಲ್ಲಿರಲಿಲ್ಲ. ಅವನು ಅವಳ ಕೈಗಳನ್ನು ಎದೆಗೊತ್ತಿಕೊಂಡು ಕಣ್ಣೀರಾಗಿದ್ದ: 'ನೋಡ್ತಾಯಿರು ಮುತ್ತೂ. ಒಂದು ದಿನ ನಿನ್ನ ಭೀಮು ಫೀಲ್ಡ್ ಮಾರ್ಷಲ್ ಆಗ್ತಾನೆ. ನನಗಾಗಿ ಕಾಯ್ತಿಯಾ?'

ಅವಳು ಗೋಣು ಆಡಿಸಿದ್ದಳು. ಒಂದು ತಿಂಗಳು ಕಳೆದಿರಲಿಲ್ಲ. ಸೋಮಯ್ಯ ಹೆಣ್ಣು ನೋಡಲು ಬಂದು ಒಪ್ಪಿಗೆ ಸೂಚಿಸಿ ಹೋಗಿದ್ದ. ಅವನು ಹೋದ ಮೇಲೆ ಕಣ್ಣೀರು ಹಾಕುತ್ತಾ ಕೂತಿದ್ದ ಅವಳನ್ನು ಅಪ್ಪ ಬೆಡಿಯ ನಳಿಗೆಯಲ್ಲಿ ಸಂತೈಸಿದ್ದ. 'ಇದರಲ್ಲಿ ಎರಡು ಗುಂಡುಗಳಿವೆ. ನೀನು ಈ ಮದುವೆಗೆ ಒಪ್ಪದಿದ್ದರೆ ಮೊದಲನೆಯದು ನಿನ್ನ ಎದೆಗೆ. ಉಳಿದದ್ದೊಂದು ನನ್ನ ಎದೆಗೆ'.

ಅವಳು ಹ್ಞೂಂ ಅನ್ನಲಿಲ್ಲ. ಊಹ್ಞೂಂ ಅನ್ನಲಿಲ್ಲ. ಮದುವೆ ಭರ್ಜರಿಯಾಗಿ ನಡೆದೇ ಹೋಯಿತು. ಮುತ್ತಮ್ಮ ಹಬೆಯಾಡುವ ಕಾಫಿ ತಂದು ಭೀಮಯ್ಯನಿಗೆ ಕೊಟ್ಟು 'ಕುಡಿ ಭೀಮು. ಊಟ ಸಿದ್ಧವಾಗಿದೆ. ಅವರು ಬೆಂಗಳೂರಿಗೆ ಹೋಗಿ ವಾರವಾಯ್ತು. ಅವರಿಗೆಂದು ಜೋಪಾನವಾಗಿರಿಸಿದ್ದು ಇಂದು ನಿನಗೆ ಸಿಗುತ್ತದೆ' ಎಂದಳು.

ಭೀಮಯ್ಯ ಕಾಫಿ ಹೀರುವಾಗ ಅವಳಿಗೆ ಮದುವೆಯ ದಿನ ನೆನಪಿಗೆ ಬಂತು. ಅಂದು ಕೊಡವ ಡ್ರೆಸ್ಸು, ರುಮಾಲು, ಪೀಚಕತ್ತಿಗಳಲ್ಲಿ ಸೋಮಯ್ಯ ಭವ್ಯವಾಗಿ ಕಂಡಿದ್ದ. ಸಾಲಾಗಿ ನಿಲ್ಲಿಸಿದ ಏಳು ಬಾಳೆಗಿಡಗಳನ್ನು ಕಚ್‌ಕಚ್ ಎಂದು ಒಂದೇಟಿಗೆ ಕತ್ತರಿಸುತ್ತಾ ತನ್ನ ಪರಾಕ್ರಮ ಪ್ರದರ್ಶಿಸಿದ್ದ. 'ಭರ್ಜರಿಯಾಗಿದ್ದಾನೆ ನಿನ್ನ ಗಂಡ, ನಿನಗೆ ದಿನಾ ಹಬ್ಬ' ಎಂದು ಗೆಳತಿಯರು ಕಿವಿಯಲ್ಲಿ ಪಿಸುಗುಟ್ಟಿ ಕೆನ್ನೆ ಕೆಂಪೇರಿಸಿದ್ದರು. ಮತ್ತಿನ ಎರಡು ವಾರ ಪ್ರೀತಿಯ ಕಾವೇರಿಯಲ್ಲಿ ಸೋಮಯ್ಯ ಅವಳೆಲ್ಲವನ್ನೂ ಸೂರೆಗೊಂಡಿದ್ದ. ಮೂರನೆಯ ವಾರ ಇದ್ದಕ್ಕಿದ್ದಂತೆ ಬೆಂಗಳೂರಿಗೆ ಹೋದವ ಒಂದು ವಾರವಾದರೂ ಬಾರದಿರುವಾಗ ರಾತ್ರೆ ಮಲಗಲು ಬರುವ ಮುದುಕಿ ಅವನ ಚಾಳಿಗಳನ್ನೆಲ್ಲಾ ಹೇಳಿದ್ದಳು. ಸಿಕ್ಕಾಗ ನೀನೂ ಅನುಭವಿಸು ಎಂದು ಬೋಧಿಸಿದ್ದಳು. ನಮ್ಮ ದೇವದೇವತೆಗಳೂ ಮಾಡಿದ್ದು ಅದನ್ನೇ ಎಂದು ಧೈರ್ಯ ತುಂಬಿದ್ದಳು.

ಬೆಂಗಳೂರಿನಿಂದ ಬಂದ ಸೋಮಯ್ಯ ಸುಸ್ತಾಗಿದ್ದ, ಮೂರು ದಿನ ಅವಳ ಮೈ ಮುಟ್ಟಿರಲಿಲ್ಲ. ಮತ್ತೆ ಮುಟ್ಟಿದಾಗ ಅವಳು ಕಲ್ಲಾಗಿದ್ದಳು. ಮತ್ತೆಂದೂ ಅವಳು ಅರಳಲಿಲ್ಲ. ಅವನು ಆಕ್ರಮಿಸಿ ಏದುಬ್ಬಸಬಿಟ್ಟು, ಬಹಳ ಬೇಗ ವಿಸರ್ಜಿಸಿ ಎದ್ದು ಬಿಡುತ್ತಿದ್ದ, ಅವಳು ಕಲ್ಲಾಗಿ ಬಿದ್ದುಕೊಳ್ಳುತ್ತಿದ್ದಳು. ಈ ಶಾಪ ಎಂದಿಗೆ ವಿಮೋಚನೆಯೋ ಎಂದು ಕೊರಗುತ್ತಿದ್ದಳು. ಸೋಮಯ್ಯ ತಿಂಗಳಿಗೊಮ್ಮೆ ಬೆಂಗಳೂರಿಗೆ ಹೋಗಿ ವಾರ, ಹತ್ತು ದಿನ ಇದ್ದು ಬರುತ್ತಿದ್ದ. ಅವಳು ಕತ್ತಲನ್ನು ದಿಟ್ಟಿಸುತ್ತಾ ಬೆಳಕಿಗಾಗಿ ಕಾಯುತ್ತಿದ್ದಳು. ಸೂರ್ಯರಶ್ಮಿ ಸೋಂಕದಲ್ಲಿನ ಕತ್ತಲನ್ನು ಹೋಗಲಾಡಿಸುವವನಿಗಾಗಿ ಹಾರೈಸುತ್ತಿದ್ದಳು.

ಭೀಮಯ್ಯ ಅವಳನ್ನು ನೋಡುತ್ತಾ ಕಾಫಿ ಹೀರಿ, ವಿಲ್ಸ್ ಹಚ್ಚಿ ಹೊಗೆಯುಗುಳಿದ. ಏನು ಮಾತಾಡಿದರೂ ಕೊನೆಗೆ ಬಾಲ್ಯದ ನೆನಪಾಗುತ್ತದೆ. ತನಗಾಗಿ ಕಾಯಲಾಗದ ಮುತ್ತಮ್ಮನ ಅಸಹಾಯಕತೆಯ ಪ್ರಸ್ತಾಪವಾಗುತ್ತದೆ. ಅಲ್ಲಿ ತಾನು ನಿಯಂತ್ರಣ ರೇಖೆಯಲ್ಲಿ ಕಾಯುವಾಗ ತನ್ನ ಮನೋಬಲ ಕುಗ್ಗದಂತೆ ಕಾಯುತ್ತಿದ್ದುದು ಮುತ್ತಮ್ಮನ ಮುಖ. ಅವಳೊಡನೆ ಆಡಿ ಕಳೆದ ದಿನಗಳ ನೆನಪು. ಕಲ್ಲಾಗಿ ಕಾದವಳು ಇಲ್ಲೀಗ ಅವಳು ತನ್ನೆದುರು ಕೂತಿದ್ದಾಳೆ. ಚಂದನದ ಗೊಂಬೆ. ಮಾತು ಒಂದೂ ಹೊರಬರುತ್ತಿಲ್ಲ. ಅವನು ಎದ್ದು ಬಾತುರೂಮಿಗೆ ಹೋಗಿ ಬಂದ.

ಅವಳು 'ಸ್ನಾನ ಮಾಡೋ ಭೀಮು. ಟವೆಲ್ಲು ತಂದ್ಕೊಡ್ತೀನಿ' ಎಂದು ಬೆಡ್ರೂಮಿಗೆ ಹೋಗಿ ವಾಡ್‌ರ್ರೋಬು ತೆರೆದಳು. ಅವಳು ಹಿಂದಕ್ಕೆ ತಿರುಗಿದಾಗ ಭೀಮಯ್ಯ ನಿಂತಿದ್ದ. ಅವಳ ಗುಂಡಿಗೆ ಅದುರಿತು. ಹೇಗೋ ಸಾವರಿಸಿಕೊಂಡು ಬಾತ್ ಟವೆಲ್ಲು ಅವನ ಕೈಗಿತ್ತಳು. ಅವನು ಅವಳ ಕೈಯನ್ನು ಹಿಡಿದುಕೊಂಡ. ಬಾತು ಟವೆಲ್ಲನ್ನು ಮಂಚಕ್ಕೆ ಬಿಸುಟು ಅವಳ ಕೈಗಳನ್ನು ತನ್ನ ಕೆನ್ನೆಯ ಮೇಲಿರಿಸಿಕೊಂಡ. ಅವಳಿಗೆ ತಾನು ಹಗುರವಾಗಿ ಗಾಳಿಯಲ್ಲಿ ತೇಲುತ್ತಿದ್ದೇನೆ ಎನಿಸಿತು. ಅವನು ಅವಳ ಕೈ ಬೆರಳುಗಳನ್ನು ಸವರಿದ. ಗುಳ್ಳೆಗಳಿರುವುದನ್ನು ನೋಡಿ 'ಇದೇನು ಮಾಡಿಕೊಂಡಿದ್ದೀಯಾ ಮುತ್ತೂ? ಅಡುಗೆ ಮಾಡುವಾಗಲೂ ನನ್ನದೇ ಯೋಚನೆಯಾ?' ಎಂದು ಬೆರಳುಗಳನ್ನು ತುಟಿಯತ್ತ ತಂದು ಮೃದುವಾಗಿ ಚುಂಬಿಸಿದ. ಅವಳು ಕೈ ಬಿಡಿಸಿಕೊಂಡು 'ಇದೆಲ್ಲಾ ಚೆನ್ನಾಗಿರಲ್ಲ, ಭೀಮೂ. ಅವ್ರು ಬರ್ಲಿ ಈ ಮಳೆಗಾಲ ಮುಗ್ದ ಕೂಡ್ಲೇ ನಿಂಗೆ ಒಬ್ಳು ಚಾಯಕಾರ್ತಿ ಮೂಡೀನ ಹುಡುಕಿ ಗಂಟು ಹಾಕಿ ಬಿಡ್ತೀವಿ' ಎಂದಳು. ಅವನು ಅವಳ ಮುಖವನ್ನು ತನ್ನ ಬೊಗಸೆಗೆ ತೆಗೆದುಕೊಂಡು ಕಣ್ಣಲ್ಲಿ ಕಣ್ಣಿಟ್ಟ. ಅಂಥಾ ಮದ್ವೇ ನಂಗಿಷ್ಟವಿಲ್ಲ ಮುತ್ತೂ. ಹಿರಿಯರೆಲ್ಲಾ ಒಪ್ಪಿ ಮಾಡಿದ ಮದ್ವೇಲಿ ನೀನ್ಯಾವ ಸುಖ ಪಟ್ಟೆ? ನಂಗೆ ಮುತ್ತು ಬಿಟ್ರೆ ಬೇರೆ ಪ್ರಪಂಚ ಇಲ್ಲ. ನನ್ನ ನಿನ್ನ ಮದ್ವೆ ಎಳವೆಯಲ್ಲಿ ಎಷ್ಟು ಸಲ ನಡೆದು ಹೋಗಿಲ್ಲ? ನೀನು ನನಗೆ ಸೇರಬೇಕಾದವಳು. ನನ್ನವಳು'.

ಅವಳು ಮುಖವನ್ನು ಬಲಕ್ಕೆ ತಿರುಗಿಸಿ ಕಂಪಿಸುತ್ತಾ ಹೇಳಿದಳು: 'ಬೇಡ ಭೀಮೂ. ಕಾಲಚಕ್ರವನ್ನು ಹಿಂದಕ್ಕೆ ತರಲಾಗುವುದಿಲ್ಲ. ನನ್ನ ಹಣೆಬರಹ ಹೀಗಿದೆ. ಅನುಭವಿಸ್ತೇನೆ. ಸುಮ್ಮೆ ಹಿಂದಿನದ್ದೆಲ್ಲಾ ನೆನಪು ಮಾಡಿ ನೋಯಿಸ್ಬೇಡ'. ಅವಳು ನುಣುಚಿಕೊಳ್ಳಲು ಯತ್ನಿಸುವಾಗ ಅವನು ಅವಳನ್ನು ಬಾಚಿ ಬಲವಾಗಿ ತಬ್ಬಿಕೊಂಡು ನಡುಗುವ ಸ್ವರದಲ್ಲಿ ಪಿಸುಗುಟ್ಟಿದ. 'ಅಲ್ಲಿ ಸೋಮಯ್ಯ ಎಸ್ಟೇಟಿನ ಗಳಿಕೆಯನ್ನು ಯಾರ್‍ಯಾರದೋ ಸೆರಗಿಗೆ ಸುರಿಯುತ್ತಿದ್ದಾನೆ. ನೀನು ಕಲ್ಲಾಗಿ ಬೆಳಕು ಬರಲೆಂದು ಕಾಯುತ್ತಿರು. ಇದೊಂದು ರಾತ್ರಿ ನಿನ್ನ ಕತ್ತಲಿಗೆ ಬೆಳಕಾಗುತ್ತೇನೆ. ಒಂದೇ ಒಂದು ರಾತ್ರಿ...'

ಮುತ್ತಮ್ಮ ಅವನಿಂದ ಬಿಡಿಸಿಕೊಂಡು ಅವನ ಎದೆಗೆ ಎರಡೂ ಕೈಗಳಿಂದ ಗುದ್ದಿದಳು. 'ಭೀಮೂ ನೀನು ಭಾರತ ಮಾತೆಯನ್ನು ರಕ್ಷಿಸುವ ಸೈನಿಕ. ಅವಳೊಬ್ಬಳು ಹೆಣ್ಣು. ನಾನು ಪರರ ಪತ್ನಿ. ಅನ್ಯರ ಪತ್ನಿಯನ್ನು ತಾಯಿಯಂತೆ ಕಾಣುವುದು ನಮ್ಮ ಸಂಸ್ಕಾರ. ಸಾಧ್ಯವಾದರೆ ಸೋಮಯ್ಯನಿಗೆ ಬುದ್ಧಿ ಹೇಳು. ಒಂದಲ್ಲಾ ಒಂದು ದಿನ ಸೋಮಯ್ಯ ಸರಿಯಾದಾನೆಂಬ ನಿರೀಕ್ಷೆಯಲ್ಲಿ ಇದ್ದೇನೆ. ನೀನು ನನ್ನನ್ನು ಬಯಸುವುದು ತಪ್ಪು. ನನಗೀಗ ನಿನ್ನ ಬಗ್ಗೆ ಮೋಹವಿಲ್ಲ. ಅದರ ಬದಲು ಅಭಿಮಾನವಿದೆ. ಅದನ್ನು ಕಳಕೊಳ್ಳಬೇಡ'.

ಭೀಮಯ್ಯ ತನ್ನನ್ನು ತಾನು ನಿಯಂತ್ರಿಸಿಕೊಂಡ. ಆಗ ಕೇಳಿಸಿತು. ಮೊದಲು ಅಸ್ಪಷ್ಟವಾಗಿ ಆಮೇಲೆ ಸ್ಪಷ್ಟವಾಗಿ ಕಾರಿನ ಹಾರನ್ನು ಶಬ್ದ. ತೋಟದ ಮನೆಯಲ್ಲಿದ್ದ ಗೂರ್ಖಾ ಓಡಿಕೊಂಡು ಬಂದು ಗೇಟು ತೆಗೆದು ಸೆಲ್ಯೂಟು ಹೊಡೆದ. ಹಜಾರದಲ್ಲಿದ್ದ ಭೀಮಯ್ಯ ಬಾಗಿಲು ತೆರೆದು ಸೋಮಯ್ಯನ ಕೈಕುಲುಕಿದ. 'ಆಗಲೇ ಬಂದ್ಯಾ ಭೀಮೂ? ನಾನು ಬರುವುದು ತಡವಾಗಲಿಲ್ಲವಲ್ಲಾ?' ಭೀಮಯ್ಯ ನಗುತ್ತಾ ಹೇಳಿದ. 'ಸರಿಯಾದ ಸಮಯಕ್ಕೆ ಬಂದೆ ಸೋಮಯ್ಯ ನೀನು ಸ್ವಲ್ಪ ತಡವಾಗುತ್ತಿದ್ದರೆ ನಿನ್ನ ಊಟ ನಾನು ಮಾಡಿ ಬಿಡುತ್ತಿದ್ದೆ'. ಮುತ್ತಮ್ಮ ದೀರ್ಘವಾಗಿ ಉಸಿರೆಳೆದುಕೊಂಡಳು.

ಪ್ರತಿಕ್ರಿಯಿಸಿ: **feedback@sudha.co.in**

